3

# ಇಸ್ರಾಯೇಲ್ಯರೊಂದಿಗೆ ದೇವರ ಒಡಂಬಡಿಕೆ

*"ಯೆಹೋವನು ಮೋಶೆಗೆ, 'ನೀನು ಈ ವಾಕ್ಯಗಳನ್ನು ಬರೆ. ಈ ವಾಕ್ಯಗಳ ಮೇರೆಗೆ ನಿನ್ನ ಸಂಗಡಲೂ ಇಸ್ರಾಯೇಲ್ಯರ ಸಂಗಡಲೂ ನಿಬಂಧನ ಮಾಡಿದ್ದೇನೆ' ಎಂದು ಹೇಳಿದನು. ಮೋಶೆ ಆ ಬೆಟ್ಟದಲ್ಲಿ ಯೆಹೋವನ ಸನ್ನಿಧಿಯಲ್ಲಿ ಹಗಲಿರುಳು ನಾಲ್ವತ್ತು ದಿನ ಇದ್ದನು. ಅವನು ಏನೂ ಊಟ ಮಾಡಲಿಲ್ಲ. ಏನೂ ಕುಡಿಯಲಿಲ್ಲ. ಆತನು ನಿಬಂಧನದ ವಾಕ್ಯಗಳನ್ನು ಅಂದರೆ ಹತ್ತು ಆಜ್ಞೆಗಳನ್ನು ಆ ಕಲ್ಲಿನ ಹಲಿಗೆಗಳ ಮೇಲೆ ಬರೆದನು" (ವಿಮೋಚನಕಾಂಡ 34:27, 28).*

ಹಳೇ ಒಡಂಬಡಿಕೆಯಲ್ಲಿ ಪ್ರಮುಖವಾದ ಒಡಂಬಡಿಕೆಗಳಲ್ಲಿ ಒಂದು, ದೇವರು ತನ್ನ ಜನಾಂಗ, ಇಸ್ರಾಯೇಲಿನೊಂದಿಗೆ ಮಾಡಿಕೊಂಡ ಆತನ ಒಡಂಬಡಿಕೆಯಾಗಿದೆ. ಅಬ್ರಹಾಮನೊಂದಿಗೆ ಮಾಡಿಕೊಂಡ ವಾಗ್ದಾನವು ಯೇಸುವಿನಲ್ಲಿ ನೆರವೇರುವವರೆಗೆ ಈ ಒಡಂಬಡಿಕೆಯು ದೇವರ ಜ್ಞಾನವನ್ನು ಭದ್ರಪಡಿಸಲು ಸ್ಥಾಪಿಸಲ್ಪಟ್ಟಿತು (ಗಲಾತ್ಯ 3:17-19).

ದೇವರು ಅಬ್ರಹಾಮನ ಹೆಸರನ್ನು (ಮೊದಲು ಅಬ್ರಾಮ, ಅರ್ಥ "ಗೌರವಿಸಲ್ಪಟ್ಟ ತಂದೆ") ಬದಲಾಯಿಸಿದ್ದು ಅವನ "ಜನಾಂಗಗಳ ತಂದೆ" ಯಂತೆ ಅವನ ಪಾತ್ರವನ್ನು ಪ್ರತಿಬಿಂಬಿಸುವದಕ್ಕಾಗಿ ಇತ್ತು (ಆದಿಕಾಂಡ 17:2-5; 22:17). ಅವನ ವಂಶಜರು ಬಹಳವಾಗಿ ಹೆಚ್ಚಾಗುವರೆಂದು ದೇವರು ವಾಗ್ದಾನ ಮಾಡಿದನು. ಈ ವಾಗ್ದಾನವನ್ನು ದೇವರು ಅಬ್ರಹಾಮನ ಮಗ ಇಸಾಕನಿಗೂ (ಆದಿಕಾಂಡ 26:4) ಮತ್ತು ಮೊಮ್ಮಗ ಯಾಕೋಬನಿಗೂ ಪುನಃ ಕೊಟ್ಟನು. ಯಾಕೋಬನ ಹೆಸರು ಇಸ್ರಾಯೇಲು ಎಂದು ಬದಲಾಯಿಸಲ್ಪಟ್ಟಿತು (ಆದಿಕಾಂಡ 28:14; 32:28).

## ಈ ಒಡಂಬಡಿಕೆಯ ಹಿನ್ನೆಲೆ

ಇಸ್ರಾಯೇಲ ಜನಾಂಗದೊಂದಿಗೆ ಒಡಂಬಡಿಕೆಯನ್ನು ಸ್ಥಾಪಿಸುವದಕ್ಕೆ ನಡಿಸಿದ ಘಟನೆಗಳು ಯಾಕೋಬನ ಕಿರಿಯ ಮಗ ಯೋಸೇಫನು ಐಗುಪ್ತದಲ್ಲಿ ಗುಲಾಮನಾಗುವಂತೆ ತನ್ನ ಸಹೋದರರಿಂದ ಮಾರಲ್ಪಟ್ಟದ್ದನ್ನು ಒಳಗೊಂಡಿರು ತ್ತವೆ, ಯೋಸೇಫನ ಯಜಮಾನನ ಹೆಂಡತಿ ಯೋಸೇಫನು ತನ್ನನು ಕೆಡಿಸಲು ಬಂದಿದ್ದನೆಂಬ ಸುಳ್ಳು ಅಪವಾದ ಹೊರಸಿದಾಗ ಅವನು ಸೆರೆಮನೆಯಲ್ಲಿ ಹಾಕಲ್ಪಟ್ಟನು. ಏಳು ವರ್ಷ ಸಮೃದ್ಧಿಯಕಾಲ, ಅದರ ನಂತರ ಏಳು ವರ್ಷ ಬರಗಾಲದ ಕುರಿತು ಫರೋಹನ ಕನಸಿನ ಅರ್ಥವನ್ನು ಯೋಸೇಫನು ಹೇಳಿದಾಗ ಅವನು ಸೆರೆಯಿಂದ ಬಿಡುಗಡೆ ಮಾಡಲ್ಪಟ್ಟನು ಮತ್ತು ಐಗುಪ್ತದಲ್ಲಿ ಫರೋಹನ ಎರಡನೆಯ ಅಧಿಕಾರಿಯಾಗಿ ಮಾಡಲ್ಪಟ್ಟನು. ಐಗುಪ್ತದಲ್ಲೆಲ್ಲಾ ಬರಗಾಲವು ಹಬ್ಬಿ, ಕಾನಾನನ್ನು ತಲುಪಿದಾಗ,

ಯಾಕೋಬನು ಧಾನ್ಯಗಳನ್ನು ಕೊಂಡುಕೊಳ್ಳಲು ತನ್ನ ಹತ್ತು ಜನ ಮಕ್ಕಳನ್ನು ಐಗುಪ್ತಕ್ಕೆ ಕಳುಹಿಸಿದನು. ಯೋಸೇಫನು ತನ್ನ ಸಹೋದರರಿಗೆ ತನ್ನನ್ನು ತಿಳಿಯಪಡಿಸಿದನಂತರ, ಬರಗಾಲದ ತೀಕ್ಷ್ಣತೆಯ ಅವಧಿಯ ಕಾರಣ, ತನ್ನ ತಂದೆ ಐಗುಪ್ತಕ್ಕೆ ಬರಬೇಕೆಂದು ಹೇಳಿ ಕಳುಹಿಸಿದನು. ಯಾಕೋಬನಿಗೆ ದೇವರು ಕಾಣಿಸಿಕೊಂಡು, ಅವನು ಐಗುಪ್ತಕ್ಕೆ ಹೋಗಬೇಕೆಂದು ಭರವಸೆಕೊಟ್ಟನು. "ನೀನು ಗಟ್ಟಾ ಇಳಿದು ಹೆದರದೆ ಐಗುಪ್ತ ದೇಶಕ್ಕೆ ಹೋಗು; ಅಲ್ಲಿ ನಿನ್ನಿಂದ ಮಹಾಜನಾಂಗವುಂಟಾಗುವಂತೆ ಮಾಡುವೆನು" ಎಂದು ಆತನು ಹೇಳಿದನು (ಆದಿಕಾಂಡ 46:3). ಯಾಕೋಬನು ತನ್ನ ಹೆಂಡತಿಯರನ್ನು, ತನ್ನ ಮಕ್ಕಳನ್ನು ಮತ್ತು ಅವರ ಹೆಂಡತಿಯರನ್ನು ಹಾಗೂ ಮಕ್ಕಳನ್ನು - ಒಟ್ಟು ಎಪ್ಪತ್ತು ಜನರು - ಕರೆದುಕೊಂಡು ಐಗುಪ್ತಕ್ಕೆ ಹೋದನು (ವಿಮೋಚನಕಾಂಡ 1:1-5). ಅವರ ಸಂಖ್ಯೆ ಬೆಳೆಯುತ್ತಾ ಹೋಯಿತು: "ಆದರೆ ಇಸ್ರಾಯೇಲ್ಯರು ಅಭಿವೃದ್ಧಿಯಾಗಿ ಅತ್ಯಧಿಕವಾಗಿ ಹೆಚ್ಚಿ ಬಹಳ ಬಲಗೊಂಡರು; ಆ ದೇಶದಲ್ಲೆಲ್ಲಾ ತುಂಬಿಕೊಂಡರು" (ವಿಮೋಚನಕಾಂಡ 1:7).

ಜನರು ಐಗುಪ್ತವನ್ನು ಪ್ರವೇಶಿಸಿ ನಾಲ್ಕುನೂರು ವರ್ಷಗಳ ನಂತರ, ಮತ್ತು ಅನೇಕ ವರ್ಷಗಳ ಗುಲಾಮಗಿರಿಯ ನಂತರ, ದೇವರ ಜನಾಂಗವನ್ನು ಮೋಶೆಯು ಐಗುಪ್ತದಿಂದ ಹೊರಗೆ ನಡಿಸಿದನು. ದೇವರು ವಾಗ್ದಾನ ಮಾಡಿದ್ದಂತೆ (ಆದಿಕಾಂಡ 12:2), ಅಬ್ರಹಾಮನ ಸಂತತಿಯವರು ಒಂದು ದೊಡ್ಡ ಜನಾಂಗವಾಗಿ ಬೆಳೆದಿದ್ದರು, ಈ ಗುಲಾಮ ಜನಸಂಖ್ಯೆಯಲ್ಲಿ ಯುದ್ಧಕ್ಕೆ ಹೋಗಲು ಶಕ್ತರಾದ, ಇಪ್ಪತ್ತು ವರ್ಷ ಪ್ರಾಯದ ಪುರುಷರು 605,550 (ಅರಣ್ಯಕಾಂಡ 1:45, 46) ಮತ್ತ ಇಸ್ರಾಯೇಲ್ಯರಲ್ಲಿ ಧಾರ್ಮಿಕ ಚಟುವಟಿಕೆಗಳಿಗಾಗಿ ಇಡಲ್ಪಟ್ಟ (ಅರಣ್ಯಕಾಂಡ 1:50-53) ಲೇವಿ ಕುಲದ 22,000 ಪುರುಷರು ಇದ್ದರು (ಅರಣ್ಯಕಾಂಡ 3:39).

ಅಬ್ರಹಾಮ, ಇಸಾಕ ಮತ್ತು ಯಾಕೋಬರ ಈ ಸಂತತಿಯವರು ಐಗುಪ್ತವನ್ನು ಬಿಟ್ಟು ಸಿನಾಯಿ ಬೆಟ್ಟಕ್ಕೆ (ವಿಮೋಚನಕಾಂಡ 19:23; 20:1-17) ಬಂದರು. ಇದು ಹೋರೇಬ ಎಂದು ಕರೆಯಲ್ಪಡುತ್ತಿತ್ತು (ಧರ್ಮೋಪದೇಶಕಾಂಡ 5:2) ಇಲ್ಲಿ ದೇವರು ಅವರಿಗೆ ಜನಾಂಗಿಕ ಧರ್ಮಶಾಸ್ತ್ರವನ್ನು ಕೊಟ್ಟನು. ಮೋಶೆಯು ಈ ಧರ್ಮಶಾಸ್ತ್ರವನ್ನು ಕುರಿತು ಹೀಗೆ ಹೇಳಿದನು, "ನಾವು ನಮ್ಮ ದೇವರಾದ ಯೆಹೋವ ನಿಗೆ ಮೊರೆಯಿಡುವಾಗೆಲ್ಲಾ ಆತನು ಸಮೀಪವಾಗಿಯೇ ಇದ್ದಾನಲ್ಲಾ; ಬೇರೆ ಎಷ್ಟು ದೊಡ್ಡ ಜನಾಂಗಕ್ಕಾದರೂ ಯಾವ ದೇವರು ಹೀಗೆ ಸಮೀಪವಾಗಿರುವನು? ನಾನು ಈ ಹೊತ್ತು ನಿಮ್ಮ ಮುಂದೆ ಇಡುವ ಇಂಥ ನ್ಯಾಯವಾದ ಆಜ್ಞಾವಿಧಿಗಳುಳ್ಳ ಈ ಧರ್ಮ ಶಾಸ್ತ್ರಕ್ಕೆ ಸಮಾನವಾದದ್ದು ಬೇರೆ ಯಾವ ಜನಾಂಗಕ್ಕೆ ಉಂಟು?" (ಧರ್ಮೋಪದೇಶ ಕಾಂಡ 4:7, 8).

## ಈ ಒಡಂಬಡಿಕೆಯ ರಚನೆ

ಧರ್ಮಶಾಸ್ತ್ರದಲ್ಲಿ ನಿಬಂಧನೆಗಳೂ ಆಜ್ಞಾವಿಧಿಗಳೂ ಮತ್ತು ನಿಯಮಗಳೂ ಒಳಗೊಂಡಿದ್ದವು (ಧರ್ಮೋಪದೇಶಕಾಂಡ 4:7, 45; 5:1). ಇವೆಲ್ಲವೂ ಕರ್ತನ ಆಜ್ಞೆಗಳು ಎಂದು ತಿಳಿಯಲ್ಪಟ್ಟವು. "ನಿಮ್ಮ ದೇವರಾದ ಯೆಹೋವನು ಕೊಟ್ಟ ಆಜ್ಞೆಗ ಳನ್ನೇ ನಾನು ನಿಮಗೆ ತಿಳಿಸುತ್ತಾ ಇದ್ದೇನೆ. ಈ ಮಾತುಗಳನ್ನು ನೀವು ಕೈಕೊಳ್ಳ ಬೇಕೆ ಹೊರತು ಅವುಗಳಿಗೆ ಏನೂ ಕೂಡಿಸಬಾರದು, ಅವುಗಳಿಂದ ಏನೂ ತೆಗೆದು ಬಿಡಬಾರದು" (ಧರ್ಮೋಪದೇಶಕಾಂಡ 4:2) ಎಂದು ಮೋಶೆ ಹೇಳಿದನು.

ಈ ಒಡಂಬಡಿಕೆಯು, "ನಿಬಂಧನ ಗ್ರಂಥ" (ವಿಮೋಚನಕಾಂಡ 24:7), "ಒಡಂಬಡಿಕೆಯ ರಕ್ತ" (ವಿಮೋಚನಕಾಂಡ 24:8) ಮತ್ತು "ಒಡಂಬಡಿಕೆಯ ಕಲ್ಲಿನ ಹಲಿಗೆಗಳು" (ಧರ್ಮೋಪದೇಶಕಾಂಡ 9:11) ಎಂಬ ಮಾತುಗಳಿಂದ ಹೇಳಲ್ಪಟ್ಟಿದೆ. "ಒಡಂಬಡಿಕೆಯ ಮಂಜೂಷದ" (ಅರಣ್ಯಕಾಂಡ 10:33; 14:44; ಧರ್ಮೋಪದೇಶ ಕಾಂಡ 10:8) ಬಗ್ಗೆ ನಾವು ಓದುತ್ತೇವೆ. ದಶಾಜ್ಞೆಗಳು ಎರಡು ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಟ್ಟಿದ್ದವು; ಅವು ಮಂಜೂಷದಲ್ಲಿ ಇಡಲ್ಪಟ್ಟಿದ್ದವು (ಧರ್ಮೋಪದೇಶಕಾಂಡ 10:4, 5).

ಒಡಂಬಡಿಕೆಯು "ಆಜ್ಞಾ ಶಾಸನ" ಎಂದು ಸಹ ಉಲ್ಲೇಖಿಸಲ್ಪಟ್ಟಿದೆ (ವಿಮೋಚನ ಕಾಂಡ 27:21; 31:18; 32:15; 34:29; 40:20). ಈ ಕಾರಣದಿಂದ, ಈ ಹೆಚ್ಚಿನ ಹೇಳಿಕೆಗಳನ್ನು ಕಂಡು ಕೊಳ್ಳುತ್ತೇವೆ: "ಆಜ್ಞಾ ಶಾಸನದ ಮಂಜೂಷ" (ವಿಮೋಚನ ಕಾಂಡ 25:16, 21, 22), "ಎರಡು ಆಜ್ಞಾ ಶಾಸನಗಳು" (ವಿಮೋಚನಕಾಂಡ 31:18), "ದೇವದರ್ಶನ [ಇಲ್ಲವೇ ಗುಡಾರ] ಮಂಜೂಷ" (ವಿಮೋಚನಕಾಂಡ 38:21; ಅರಣ್ಯಕಾಂಡ 1:50; 2 ಪೂರ್ವಕಾಲವೃತ್ತಾಂತ 24:6), "ಆಜ್ಞಾ ಶಾಸನಗಳ ಮೇಲಿನ ಕೃಪಾಸನ" (ಯಾಜಕಕಾಂಡ 16:13), ಮತ್ತು "ಆಜ್ಞಾ ಶಾಸನದ ತೆರೆ" (ಯಾಜಕಕಾಂಡ 24:3). ಹೆಸರಿಡುವ ಈ ವಿಧಾನವು ಯೆಹೂದಿ ಪರಿಶುದ್ಧ ಬರಹ ಗಳು ಹಳೇ ಒಡಂಬಡಿಕೆ (testimony) ಎಂದೂ ಕ್ರೈಸ್ತ ಪರಿಶುದ್ಧ ಬರಹಗಳು ಹೊಸ ಒಡಂಬಡಿಕೆ ಎಂದೂ ಕರೆಯಲ್ಪಡಲು ತಳಹದಿಯಾಗಿರಬಹುದು.

ಹಳೇ ಒಡಂಬಡಿಕೆಯಲ್ಲಿ ಒಡಂಬಡಿಕೆಯ ಮಂಜೂಷವು ಯೋಷಿಯನ ಸುಧಾರಣೆಗಳ ಸಮಯದಲ್ಲಿ, ಯೆಹೂದವು ಬಾಬೇಲಿಗೆ ಸೆರೆಯಾಗಿ ಒಯ್ಯಲ್ಪಡುವ ಕೆಲವು ವರ್ಷಗಳ ಮೊದಲು ಕೊನೆಯದಾಗಿ ನಮೂದಿಸಲ್ಪಟ್ಟಿತು (2 ಪೂರ್ವಕಾಲ ವೃತ್ತಾಂತ 35:3). ಮಂಜೂಷದ ಹೊಸ ಒಡಂಬಡಿಕೆಯ ಉಲ್ಲೇಖವು (ಇಬ್ರಿಯ 9:4) ಬರಹಗಾರನು ಮಂಜುಷದ ಬಗ್ಗೆ ತಿಳಿದಿದ್ದನೆಂಬುದನ್ನು ಸೂಚಿಸುತ್ತದೆ. ಅದರ ಕೊನೆಯ ಉಲ್ಲೇಖವು ಯೋಹಾನನಿಂದ ಮಾಡಲ್ಪಟ್ಟಿತು, ಅವನು (ಒಂದು ದರ್ಶನದಲ್ಲಿ) ಪರಲೋಕದಲ್ಲಿ ದೇವರ ಆಲಯದಲ್ಲಿ ಅದನ್ನು ಕಂಡನು (ಪ್ರಕಟನೆ 11:19).

"ಒಡಂಬಡಿಕೆ" ಮತ್ತು "ಆಜ್ಞಾ ಶಾಸನ" ಎಂಬ ಎರಡೂ ಮಾತುಗಳು ವಿಮೋಚ ನಕಾಂಡ, ಯಾಜಕಕಾಂಡ ಮತ್ತು ಅರಣ್ಯಕಾಂಡಗಳಲ್ಲಿ ಉಪಯೋಗಿಸಲ್ಪಟ್ಟಿರುವಾಗ, ದಶಾಜ್ಞೆಗಳನ್ನು ಉಲ್ಲೇಖಿಸುವಾಗ ಧರ್ಮೋಪದೇಶಕಾಂಡವು "ಒಡಂಬಡಿಕೆ" ಎಂಬುದನ್ನು ಮಾತ್ರವೇ ಉಪಯೋಗಿಸುತ್ತದೆ ಆದರೆ "ಆಜ್ಞಾ ಶಾಸನ" ಎಂಬುದನ್ನು ಉಪಯೋಗಿಸುವದಿಲ್ಲ. ಇದಕ್ಕೆ ಮಹತ್ವವಿರುವದಿಲ್ಲ.

## ಈ ಒಡಂಬಡಿಕೆಯ ಸ್ವಭಾವ

ಇಸ್ರಾಯೇಲ್ಯರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯನ್ನು ಕುರಿತು ಮುಖ್ಯವಾದ ಸಂಗತಿಗಳು ಲಭ್ಯವಿರುತ್ತವೆ.

(1) *ದೇವರು ಒಡಂಬಡಿಕೆ ಮಾಡಿದನು.* ಎರಡು ಪಕ್ಷಗಳಲ್ಲಿ ಕಡಿಮೆಯಾದ ಇಸ್ರಾಯೇಲಿನ ಮೇಲೆ ದೇವರು ಹೊರಿಸಿದ ಒಪ್ಪಂದವಾಗಿ ದೇವರು ಮೋಶೆಗೆ ಕೊಡುತ್ತಿದ್ದ ಮಾತುಗಳನ್ನು ಬರೆಯ ಬೇಕೆಂದು ಅವನಿಗೆ ಹೇಳಿದನು, ಯಾಕಂದರೆ ಈ ಮಾತುಗಳ ಪ್ರಕಾರ, ಆತನು ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಿದ್ದನು (ವಿಮೋಚನಕಾಂಡ 34:27). "ನಮ್ಮ ದೇವರಾದ ಯೆಹೋವನು ಹೋರೇಬಿನಲ್ಲಿ

ನಮ್ಮ ಸಂಗಡ ನಿಬಂಧನೆಯನ್ನು ಮಾಡಿದನು" (ಧರ್ಮೋಪದೇಶಕಾಂಡ 5:2) ಎಂದು ಮೋಶೆ ಹೇಳಿದನು.

(2) *ಒಡಂಬಡಿಕೆಯು ದೇವರಿಗೂ ಇಸ್ರಾಯೇಲ್ಯರಿಗೂ ಮಧ್ಯದಲ್ಲಿ ಇತ್ತು.* ದೇವರು ಮತ್ತು ಇಸ್ರಾಯೇಲ ಜನಾಂಗ ಮಾತ್ರವೇ ಒಡಂಬಡಿಕೆಯಲ್ಲಿ ಒಳಗೊಂಡಿದ್ದರೆಂದು ಹೇಳಲ್ಪಟ್ಟಿದೆ (ವಿಮೋಚನಕಾಂಡ 34:27; ಧರ್ಮೋಪದೇಶಕಾಂಡ 5:1, 2; 1 ಅರಸುಗಳು 8:9, 21). ಒಡಂಬಡಿಕೆಯು ಇಸ್ರಾಯೇಲ್ಯರ ಪೂರ್ವಜರೊಂದಿಗೆ ಇಲ್ಲವೇ ಇತರ ಜನಾಂಗಗಳೊಂದಿಗೆ ಮಾಡಲ್ಪಡಲಿಲ್ಲ. "ಕರ್ತನು ನಮ್ಮ ಪೂರ್ವಿಕರ ಸಂಗಡ ಈ ನಿಬಂಧನೆಯನ್ನು ಮಾಡದೆ ಈಗ ಇಲ್ಲಿ ಜೀವದಿಂದಿರುವ ನಮ್ಮ ಸಂಗಡಲೇ ಇದನ್ನು ಮಾಡಿದನು" (ಧರ್ಮೋಪದೇಶಕಾಂಡ 5:3) ಎಂದು ಮೋಶೆ ಹೇಳಿದನು. ಒಡಂಬಡಿಕೆಯು ಇಸ್ರಾಯೇಲ ಜನಾಂಗವನ್ನು ಮಾತ್ರವೇ ಒಳಗೊಂಡ ಮುಂದುವರಿಯುವ ಒಡಂಬಡಿಕೆಯಾಗಿತ್ತು.

(3) *ಒಡಂಬಡಿಕೆಗೆ ಅದರ ಹೃದಯದಲ್ಲಿ ದಶಾಜ್ಞೆಗಳಿದ್ದವು.* "ಆತನು ನಿಬಂಧನದ ವಾಕ್ಯಗಳನ್ನು ಅಂದರೆ ಹತ್ತು ಆಜ್ಞೆಗಳನ್ನು ಆ ಕಲ್ಲಿನ ಹಲಿಗೆಗಳ ಮೇಲೆ ಬರೆದನು" ಎಂದು ವಿಮೋಚನಕಾಂಡ 34:28ಬಿ ಹೇಳುತ್ತದೆ. ನಲ್ವತ್ತು ವರ್ಷಗಳ ನಂತರ, ವಾಗ್ದತ್ತ ದೇಶದೊಳಗೆ ಇಸ್ರಾಯೇಲ್ಯರು ಯೊರ್ದನ್ ಹೊಳೆಯನ್ನು ದಾಟುವ ಮೊದಲು, ಮೋಶೆ ಹೀಗೆ ಹೇಳಿದನು: "ನೀವು ಅನುಸರಿಸಬೇಕೆಂದು ಆತನು ನೇಮಿಸಿದ ನಿಬಂಧನೆಯನ್ನು ಅಂದರೆ ಹತ್ತು ಕಟ್ಟಳೆಗಳನ್ನು ನಿಮಗೆ ವಿವರಿಸಿ ಎರಡು ಕಲ್ಲಿನ ಹಲಿಗೆಗಳಲ್ಲಿ ಕೆತ್ತಿಸಿದನು" (ಧರ್ಮೋಪದೇಶಕಾಂಡ 4:13; ನೋಡಿರಿ 10:1-4).

"ದಶಾಜ್ಞೆಗಳು" ಎಂಬ ಮಾತಿನಲ್ಲಿ "ಆಜ್ಞೆಗಳು" ಎಂಬ ಮಾತು ಹಿಬ್ರೂ *dabar* ಎಂಬುದರ ಭಾಷಾಂತರವಾಗಿದೆ, ಅದರ ಅರ್ಥ "ಪದ" ಇಲ್ಲವೇ "ಹೇಳಿಕೆ" ಎಂಬುದು. ಈ ನಾಮಪದವು "ಪದ" ಎಂದು 770 ಸಲ ಭಾಷಾಂತರಿಸಲ್ಪಟ್ಟಿದೆ, ಆದರೆ "ಆಜ್ಞೆ" ಎಂದು ಕಿಂಗ್ ಜೇಮ್ಸ್ ಆವೃತ್ತಿಯಲ್ಲಿ ಕೇವಲ ಇಪ್ಪತ್ತು ಸಲ ಮಾತ್ರ ಭಾಷಾಂತರಿಸಲ್ಪಟ್ಟಿದೆ. ಹಿಬ್ರೂ *mitsvah* ಪದವು ಬಹಳ ಸಲ "ಆಜ್ಞೆ" ಎಂದು ಭಾಷಾಂತರಿಸಲ್ಪಟ್ಟಿದ್ದು ಎಂದೂ ದಾಶಾಜ್ಞೆಗಳಿಗೆ ಉಲ್ಲೇಖಿಸಲು ಉಪಯೋಗಿಸಲ್ಪಟ್ಟಿರುವದಿಲ್ಲ. ಹೊಸ ಒಡಂಬಡಿಕೆಯು *entole* ಎಂಬ ಪದವನ್ನು ಉಪಯೋಗಿಸುತ್ತದೆ. ಅದು ಸತತವಾಗಿ "ಆಜ್ಞೆ" ಎಂದರ್ಥಕೊಡುತ್ತದೆ. ಈ ಹತ್ತು ಹೇಳಿಕೆಗಳು ಕೇವಲ ಒಳ್ಳೇ ವಿಚಾರಗಳಂತೆ ವಿಚಾರಿಸಲ್ಪಡಬಾರದು. ಆದರೆ ಅವು ಹೇಳಲ್ಪಟ್ಟ ರೀತಿಯಲ್ಲಿಯೇ, ಅವು ದೇವರ ವಾಕ್ಯಗಳು, ಆತನ ಆಜ್ಞೆಗಳು ಎಂದು ಯೋಚಿಸಲ್ಪಡಬೇಕು.

(4) *ಮೋಶೆಯು ಒಡಂಬಡಿಕೆಯ ಮಧ್ಯಸ್ಥನಾಗಿದ್ದನು.* ಒಡಂಬಡಿಕೆಯು ಕೊಡಲ್ಪಡುವದನ್ನು ವಿವರಿಸುವಲ್ಲಿ ಮೋಶೆಯು ಹೀಗೆ ಹೇಳಿದ್ದಾನೆ: "ಯೆಹೋವನು ಆ ಬೆಟ್ಟದ ಮೇಲೆ ಬೆಂಕಿಯ ಜ್ವಾಲೆಯೊಳಗಿಂದ ಮುಖಾಮುಖಿಯಾಗಿ ನಿಮ್ಮ ಸಂಗಡ ಮಾತಾಡಲಾಗಿ ನೀವು ಆ ಬೆಂಕಿಯ ಜ್ವಾಲೆಯ ದೆಸೆಯಿಂದ ಭಯಪಟ್ಟು ಬೆಟ್ಟವನ್ನು ಹತ್ತದೆ ಹೋಗಲಾಗಿ ನಾನು ಯೆಹೋವನಿಗೂ ನಿಮಗೂ ನಡುವೆ ನಿಂತು ಆತನು ಆಡಿದ ಮಾತುಗಳನ್ನು ನಿಮಗೆ ತಿಳಿಸಿದೆನು" (ಧರ್ಮೋಪದೇಶಕಾಂಡ 5:4, 5). ಈ ಹೇಳಿಕೆಯ ನಂತರ, ಮೋಶೆಯು ಇಸ್ರಾಯೇಲ್ಯರಿಗೆ ದಶಾಜ್ಞೆಗಳನ್ನು ಕೊಟ್ಟನು (ಧರ್ಮೋಪದೇಶಕಾಂಡ 5:6-21).

(5) *ಒಡಂಬಡಿಕೆಯು ಸೀನಾಯಿ ಪರ್ವತದಲ್ಲಿ ಇಲ್ಲವೇ ಹೋರೇಬಿನಲ್ಲಿ ಕೊಡಲ್ಪಟ್ಟಿತು.* ಒಡಂಬಡಿಕೆಯು ಕೊಡಲ್ಪಡುವ ಮೊದಲು ಮೋಶೆಯು ಇಸ್ರಾಯೇಲ ಜನಾಂಗವನ್ನು ಸೀನಾಯಿ ಬೆಟ್ಟದ ಬಳಿಯಲ್ಲಿ ಕರತಂದನು (ವಿಮೋಚನಕಾಂಡ 19:17,

18). ಸಿನಾಯಿ ಬೆಟ್ಟವನ್ನೇರಿ, ದೇವರಿಂದ ಒಡಂಬಡಿಕೆಯನ್ನು ಸ್ವೀಕರಿಸಿ, ಮೋಶೆಯು ಅದನ್ನು ಇಸ್ರಾಯೇಲ್ಯರಿಗೆ ಕೊಡಲು ಕೆಳಗಿಳಿದು ಬಂದನು (ವಿಮೋಚನಕಾಂಡ 19:23-20:17). ಅವರೊಂದಿಗೆ ಹೋರೇಬಿನಲ್ಲಿ ದೇವರು ಒಡಂಬಡಿಕೆಯನ್ನು ಮಾಡಿಕೊಂಡಿದ್ದಾನೆಂದು ತಿಳಿಸಿದನು; ಆಗ ಅವನು ಅವರಿಗೆ ದಶಾಜ್ಞೆಗಳನ್ನು ಪುನಃ ಹೇಳಿದನು (ಧರ್ಮೋಪದೇಶಕಾಂಡ 5:2-21).

(6) *ಒಡಂಬಡಿಕೆಯ ಮೂಲ ದಾಖಲೆಯು ಎರಡು ಕಲ್ಲಿನ ಹಲಿಗೆಗಳ ಮೇಲೆ ಬರೆಯಲ್ಪಟ್ಟಿದ್ದವು, ಅವು ಒಡಂಬಡಿಕೆಯ ಮಂಜೂಷದಲ್ಲಿ ಇಡಲ್ಪಟ್ಟವು.* ದಶಾಜ್ಞೆಗಳ ಮಾತುಗಳು ಹಲಿಗೆಗಳ ಎರಡೂ ಬದಿಗಳಲ್ಲಿ (ವಿಮೋಚನಕಾಂಡ 32:15, 16) "ದೇವರ ಬೆರಳಿನಿಂದ ಬರೆಯಲ್ಪಟ್ಟವು [ಇಲ್ಲವೇ ಕೆತ್ತಲ್ಪಟ್ಟವು]" (ವಿಮೋಚನಕಾಂಡ 31:18; ಧರ್ಮೋಪದೇಶಕಾಂಡ 9:10). ಅವು ಎರಡು ಹಲಿಗೆಗಳ ಮೇಲೆ ಬರೆಯಲ್ಪಟ್ಟವು ಎಂಬ ಸಂಗತಿಯು ಪುನಃ ವಿಮೋಚನಕಾಂಡ 34:1 ಮತ್ತು ಧರ್ಮೋಪದೇಶಕಾಂಡ 5:22; 9:10; 10:3, 4ರಲ್ಲಿ ಹೇಳಲ್ಪಟ್ಟಿದೆ.

ನಿಜವಾಗಿಯೂ ಮೋಶೆಯು ಪರ್ವತದಿಂದ ಕೆಳಗಿಳಿದು ಬರುವಾಗ ಇಸ್ರಾಯೇಲ್ಯರು ದುಷ್ಟತ್ವದಲ್ಲಿ ತೊಡಗಿದ್ದನ್ನು ಕಂಡುಕೊಂಡಾಗ ಮೊದಲಿನ ಕಲ್ಲಿನ ಹಲಿಗೆಗಳನ್ನು ಒಡೆದು ಹಾಕಿದನು (ವಿಮೋಚನಕಾಂಡ 32:19; ಧರ್ಮೋಪದೇಶಕಾಂಡ 9:16, 17). ಎರಡನೆಯ ಸಲ ಮೋಶೆಯು ಸಿನಾಯಿ ಬೆಟ್ಟವನ್ನೇರಿ ಹೋಗುವ ಮೊದಲು, ಜಾಲೀಮರದಿಂದ ಒಂದು ಮಂಜೂಷವನ್ನು ಮಾಡಿಸಬೇಕೆಂದು ದೇವರು ಮೋಶೆಗೆ ಹೇಳಿದನು (ಮಂಜೂಷಕ್ಕಾಗಿ ವಿವರಣೆಗಳು ವಿಮೋಚನಕಾಂಡ 25:10-22ರಲ್ಲಿ ಕೊಡಲ್ಪಟ್ಟಿವೆ: ಮಂಜೂಷವನ್ನು ಮಾಡಿದ್ದು ವಿಮೋಚನಕಾಂಡ 37:1-9ರಲ್ಲಿ ದಾಖಲೆಯಾಗಿದೆ). ಮೋಶೆಯು ಹೊಸ ಹಲಿಗೆಗಳನ್ನು ಸ್ವೀಕರಿಸಿದ ನಂತರ (ವಿಮೋಚನ ಕಾಂಡ 34:28ಬಿ), ಅವನು ಪರ್ವತದಿಂದ ಕೆಳಗಿಳಿದು ಬಂದನು ಮತ್ತು ಅವುಗ ಳನ್ನು ಮಂಜೂಷದಲ್ಲಿ ಇಟ್ಟನು (ಧರ್ಮೋಪದೇಶಕಾಂಡ 10:1-5). ಸೊಲೊಮೋನನ ದಿನಗಳಲ್ಲಿ ಈ ಹಲಿಗೆಗಳು ಇನ್ನೂ ಮಂಜೂಷದಲ್ಲಿ ಇದ್ದವು (1 ಅರಸುಗಳು 8:9, 21).

(7) *ಜನಾಂಗವು ಐಗುಪ್ತವನ್ನು ಬಿಟ್ಟನಂತರ ದೇವರು ಇಸ್ರಾಯೇಲ್ಯರೊಂದಿಗೆ ಒಡಂಬಡಿಕೆ ಮಾಡಿಕೊಂಡನು* (1 ಅರಸುಗಳು 8:9, 12). ಅದು ಆದಾಮನೊಂದಿಗೆ, ನೋಹನೊಂದಿಗೆ, ಅಬ್ರಹಾಮನೊಂದಿಗೆ, ಇಸಾಕನೊಂದಿಗೆ, ಇಲ್ಲವೇ ಯಾಕೋಬನೊಂದಿಗೆ - ಅವರ ನಂತರದ ಯಾವುದೇ ತಕ್ಷಣದ ಸಂತತಿಯವರೊಂದಿಗೆ (ಧರ್ಮೋಪದೇಶ ಕಾಂಡ 5:1-4) ಇಲ್ಲವೇ ಭೂಲೋಕದಲ್ಲಿ ಇತರ ಯಾವುದೇ ಜನಾಂಗದೊಂದಿಗೆ ಮಾಡಲ್ಪಡಲಿಲ್ಲ. ಇಸ್ರಾಯೇಲ್ಯರು ಒಂದು ಜನಾಂಗವಾಗುವ ವರೆಗೆ ಒಡಂಬಡಿಕೆಯು ಮಾಡಲ್ಪಡದಂಥದ್ದಾಗಿತ್ತು, ಇಸ್ರಾಯೇಲ್ಯರು ಐಗುಪ್ತವನ್ನು ಬಿಟ್ಟ ನಂತರದ ವರೆಗೆ ಅದು ಸಂಭವಿಸಲಿಲ್ಲ. ಅವರು ಒಂದು ಕುಟುಂಬದಿಂದ, ಸಂಚಾರಿ ಕುಲವಾಗಿ, ಐಗುಪ್ತದಲ್ಲಿ ಗುಲಾಮ ಜನಾಂಗವಾಗಿ, ಪೂರ್ಣವಾಗಿ ಬೆಳೆದ ಜನಾಂಗವಾಗಿ ಆಗುವವರೆಗೆ ಪ್ರಗತಿ ಹೊಂದಿದರು.

(8) *ಒಡಂಬಡಿಕೆಯು ರಕ್ತದಿಂದ ಪ್ರಮಾಣೀಕರಿಸಲ್ಪಟ್ಟ, ಬಂಧಿಸುವ ಒಪ್ಪಂದ,* ಕರಾರು ಇಲ್ಲವೇ ಒಪ್ಪಿಕೊಳ್ಳುವಿಕೆಯಾಗಿತ್ತು. ಹೊಸ ಒಡಂಬಡಿಕೆಯು ಪ್ರತಿಷ್ಠಿಸಲ್ಪಟ್ಟು, ಅದನ್ನು ಮಾಡಿದಾತನ ಮರಣದಿಂದ ಜಾರಿಯಲ್ಲಿ ತರಲ್ಪಟ್ಟಿತು ಎಂದು ಹೇಳಿದ ನಂತರ (ಇಬ್ರಿಯ 9:16, 17), ಇಬ್ರಿಯರಿಗೆ ಬರೆದ ಪತ್ರಿಕೆಯ ಬರಹಗಾರನು ಹೀಗೆ ಹೇಳಿದ್ದಾನೆ,

ಹೀಗಿರಲಾಗಿ ಮೊದಲನೆಯ ಒಡಂಬಡಿಕೆಯಾದರೂ ರಕ್ತವಿಲ್ಲದೆ ಸ್ಥಾಪಿತ ವಾಗಲಿಲ್ಲ. ಮೋಶೆಯು ದೇವರ ವಿಧಿಗಳನ್ನೆಲ್ಲಾ ಧರ್ಮಶಾಸ್ತ್ರದ ಪ್ರಕಾರ ಜನರೆಲ್ಲರಿಗೆ ಹೇಳಿದ ಮೇಲೆ ನೀರು, ಕೆಂಪು ಉಣ್ಣೆ, ಹಿಸ್ಸೋಪುಕಡ್ಡಿ ಇವುಗ ಳೊಂದಿಗೆ ಹೋರಿಕರಗಳ ಮತ್ತು ಹೋತಗಳ ರಕ್ತವನ್ನು ತೆಗೆದು ಕೊಂಡು, "ಇದು ದೇವರು ನಿಮಗೋಸ್ಕರ ವಿಧಿಸಿದ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತವಾಗಿದೆ ಎಂದು ಹೇಳಿ ಅದನ್ನು ಗ್ರಂಥದ ಮೇಲೆಯೂ ಎಲ್ಲಾ ಜನರ ಮೇಲೆಯೂ ಪ್ರೋಕ್ಷಿಸಿದನು" (ಇಬ್ರಿಯ 9:18-20).

ಒಡಂಬಡಿಕೆಯ ಪ್ರತಿಷ್ಠಾರ್ಪನೆಯು ಯುವ ಜನರು ಪ್ರಾಣಿ ಯಜ್ಞಗಳನ್ನು ಅರ್ಪಿಸಿದ ನಂತರ ನಡೆಯಿತು. "ಆಗ ಮೋಶೆ ಆ ರಕ್ತವನ್ನು ತೆಗೆದುಕೊಂಡು ಜನರ ಮೇಲೆ ಚಿಮುಕಿಸಿ ಇಗೋ, ಈ ಗ್ರಂಥದಲ್ಲಿ ಹೇಳಿರುವ ಎಲ್ಲಾ ಆಜ್ಞೆಗಳ ಪ್ರಕಾರ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತವು ಇದೇ ಅಂದನು" (ವಿಮೋಚನಕಾಂಡ 24:8).

ಒಮ್ಮೆ ಒಡಂಬಡಿಕೆಯು ಪ್ರಮಾಣೀಕರಿಸಲ್ಪಟ್ಟನಂತರ, ಅದಕ್ಕೆ ಏನೂ ಕೂಡಿಸಲ್ಪಡುವದಿಲ್ಲ ಇಲ್ಲವೇ ಬದಲಾಯಿಸಲ್ಪಡುವದಿಲ್ಲ. ಒಡಂಬಡಿಕೆಯ ಬದಲಾಯಿಸಲ್ಪಡದ ಸ್ವಭಾವವನ್ನು ಪೌಲನು ತೋರಿಸಿದನು: "ಸಹೋದರರೇ, ಲೋಕದ ವ್ಯವಹಾರವನ್ನು ಹಿಡಿದು ಮಾತಾಡುತ್ತೇವೆ. ಸ್ಥಿರಪಡಿಸಿದ ಒಂದು ಒಡಂಬಡಿಕೆಯು ಕೇವಲ ಮನುಷ್ಯನದಾಗಿದ್ದರೂ ಅದನ್ನು ಯಾರೂ ರದ್ದು ಮಾಡುವದಿಲ್ಲ, ಅದಕ್ಕೆ ಹೆಚ್ಚು ಮಾತುಗಳನ್ನು ಕೂಡಿಸುವದಿಲ್ಲ" (ಗಲಾತ್ಯ 3:15). ಒಂದು ಸಲ ಅದು ಸರ್ಮಪಿಸಲ್ಪಟ್ಟರೆ, ಇಸ್ರಯೇಲ್ಯರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಗೆ ಯಾವ ಶರತ್ತುಗಳೂ ಕೂಡಿಸಲ್ಪಡ ಬಾರದು ಮತ್ತು ಒಡಂಬಡಿಕೆಯಲ್ಲಿ ಬೇರೆ ಯಾವುದೇ ಜನಾಂಗಗಳು ಸೇರಿಸಲ್ಪಡಬಾರದು ಎಂಬ ನಿರ್ಧಾರಕ್ಕೆ ಬರ ಬೇಕಾಗುತ್ತದೆ. ಅದು ನಿರ್ದಿಷ್ಟವಾದ ನಿಯಮಗಳೊಂದಿಗೆ ದೇವರು ಮತ್ತು ಇಸ್ರಾಯೇಲ್ಯರು ಮಾತ್ರ ಒಳಗೊಂಡ ಒಪ್ಪಂದವಾಗಿತ್ತು, ಹಾಗೂ ಬೇರೆ ಯಾವದೇ ಜನಾಂಗ ಕೂಡಿಸಲ್ಪಟ್ಟಿರಲಿಲ್ಲ.

(9) *ಇಸ್ರಾಯೇಲ್ಯರು ಒಡಂಬಡಿಕೆಯನ್ನು ಕೈಕೊಂಡರೆ ಕೆಲವೊಂದು ಆಶೀರ್ವಾದಗಳು ಕೊಡಲ್ಪಡುವವು.* "ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗ ಳಲ್ಲಿ ನನಗೆ ಸ್ವಕೀಯ ಜನರಾಗುವಿರಿ; ಸಮಸ್ತ ಭೂಮಿಯೂ ನನ್ನದಷ್ಟೆ. ನೀವು ನನಗೆ ಯಾಜಕ ರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ" (ವಿಮೋಚನಕಾಂಡ 19:5, 6ಎ) ಎಂದು ದೇವರು ಅವರಿಗೆ ಹೇಳಿದನು.

ದಶಾಜ್ಞೆಗಳನ್ನು ಕೊಟ್ಟನಂತರ ಮೋಶೆಯು ಇಸ್ರಾಯೇಲ್ಯರಿಗೆ ಹೀಗೆ ಹೇಳಿದನು, "ನೀವು ಸ್ವಲ್ಪವಾದರೂ ತಪ್ಪದೆ ನಿಮ್ಮ ದೇವರಾದ ಯೆಹೋವನು ಆಜ್ಞಾಪಿಸಿದಂತೆಯೇ ನಡೆದುಕೊಳ್ಳಬೇಕು. ನೀವು ಸ್ವತಂತ್ರಿಸಿಕೊಳ್ಳುವ ದೇಶದಲ್ಲಿ ಬಹುಕಾಲ ಶುಭವುಳ್ಳರಾಗಿ ಬದುಕಿಕೊಳ್ಳುವಂತೆ ನಮ್ಮ ದೇವರಾದ ಯೆಹೋವನು ಆಜ್ಞಾಪಿಸಿದ ಮಾರ್ಗದಲ್ಲೇ ನಡೆಯಬೇಕು" (ಧರ್ಮೋಪದೇಶಕಾಂಡ 5:32, 33).

ಇಸ್ರಾಯೇಲ್ಯರು ದೇವರ ಒಡಂಬಡಿಕೆಯನ್ನು ಕೈಕೊಂಡು ನಡೆದರೆ ಆತನು ಅವರನ್ನು ತನ್ನ ವಿಶೇಷ ರಾಜ್ಯವಾಗಿ ತೆಗೆದುಕೊಳ್ಳುವನೆಂದು ಈ ವಾಕ್ಯಗಳಿಂದ ಕಲಿತುಕೊಳ್ಳುತ್ತೇವೆ. ದೇಶದಲ್ಲಿ ಸಮೃದ್ಧಿಯೊಂದಿಗೆ ದೀರ್ಘಾಯುಷ್ಯವನ್ನು ಆತನು ಕೊಡುವನೆಂದು ಅರ್ಥವಾಗುತ್ತದೆ. ಅಬ್ರಹಾಮ, ಇಸಾಕ ಮತ್ತು ಯಾಕೋಬ

ರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯಿಂದ ದೇಶವು ವಾಗ್ದಾನವಾಗಿ ಕೊಡಲ್ಪಟ್ಟಿದ್ದರೂ ಇಸ್ರಾಯೇಲ್ಯರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯನ್ನು ಅವರು ಕೈಕೊಂಡರೆ ದೇಶವು ಅವರಿಗೆ ವಶವಾಗಿ ಮುಂದುವರಿಯುವುದು.

ದೇವರು ಒಡಂಬಡಿಕೆಯಲ್ಲಿ ಮರಣಾನಂತರದ ಜೀವನದ ಆಶೀರ್ವಾದ, ನಿತ್ಯ ಜೀವ, ಇಲ್ಲವೇ ಪರಲೋಕದಲ್ಲಿ ದೇವರೊಂದಿಗೆ ವಾಸಿಸುವುದು ಇದಾವುದನ್ನೂ ಕೂಡಿಸಲಿಲ್ಲ. ಒಡಂಬಡಿಕೆಯ ನಿಯಮಗಳು ಕೇವಲ ಲೌಕಿಕವಾದ, ಭೂಲೋಕದ ಆಶೀರ್ವಾದಗಳನ್ನು ಒಳಗೊಂಡಿದ್ದವು. ಒಡಂಬಡಿಕೆಯನ್ನು ಕೈಕೊಳ್ಳುವವರಿಗೆ ದೇಶದಲ್ಲಿ ಸಮೃದ್ಧಿಯೊಂದಿಗೆ, ದೀರ್ಘಾಯುಷ್ಯಯು ವಾಗ್ದಾನ ಮಾಡಲ್ಪಟ್ಟಿತ್ತು.

(10) *ಒಡಂಬಡಿಕೆಯನ್ನು ಮೀರುವುದು ಕೆಲವು ಶಾಪಗಳಲ್ಲಿ ಪರಿಣಾಮ ಗೊಳ್ಳುವುದು.* ಇಸ್ರಾಯೇಲ್ಯರು ದೇವರ ಒಡಂಬಡಿಕೆಗೆ ವಿಧೇಯರಾಗದಿದ್ದರೆ ಒಡಂಬಡಿಕೆ ಯಲ್ಲಿ ಒಳಗೊಂಡಿದ್ದ ಆಶೀರ್ವಾದಗಳನ್ನು ದೇವರು ತಡೆಹಿಡಿಯುವನು ಮತ್ತು ಇಸ್ರಾಯೇಲ್ಯರ ಮೇಲೆ ತೊಂದರೆಗಳನ್ನೂ ನಾಶನಗಳನ್ನೂ ಬರಮಾಡುವನು. ಇಸ್ರಾಯೇಲ್ಯರು ಒಡಂಬಡಿಕೆಯನ್ನು ಮುರಿದದ್ದರಿಂದ - ಸೆರೆಯ ವಾಸ ಮತ್ತು ದೇಶದಿಂದ ಸೆರೆಯಾಗಿ ಒಯ್ಯಲ್ಪಟ್ಟದ್ದನ್ನು ಒಳಗೊಂಡು - ಕಷ್ಟಗಳನ್ನು ಸಹಿಸಿದರು.

ಯಾಜಕಕಾಂಡ 26ರಲ್ಲಿ ದೇವರು ಇಸ್ರಾಯೇಲ್ಯರಿಗೆ ಹೀಗೆ ಹೇಳಿದನು,

> ಆದರೆ ನೀವು ನನ್ನ ಮಾತನ್ನು ಕೇಳದೆ ಈ ಆಜ್ಞೆಗಳನ್ನೆಲ್ಲಾ ಅನುಸರಿಸದೆ ನನ್ನ ನಿಯಮಗಳನ್ನು ಬೇಡವೆಂದು ನನ್ನ ವಿಧಿಗಳನ್ನು ತಳ್ಳಿಬಿಟ್ಟರೆ ನೀವು ನನ್ನ ಆಜ್ಞೆಗಳನ್ನು ಅನುಸರಿಸದೆ ನನ್ನ ನಿಬಂಧನವನ್ನು ಮೀರಿ ನಡೆದರೆ, ನಾನು ನಿಮಗೆ ಪ್ರತಿಯಾಗಿ ಇದನ್ನು ಮಾಡುವೆನು (ವಚನಗಳು 14-16ಎ).

ವಿವಿಧ ತೊಂದರೆಗಳಿಂದ ಅವರನ್ನು ಬಾಧಿಸುವೆನೆಂದು ದೇವರು ಹೇಳಿದನು. ಅದು ಅವರನ್ನು ಬದಲಾಯಿಸದಿದ್ದರೆ, ಏಳು ಸಲ ಹೆಚ್ಚಾಗಿ ದಂಡಿಸುವೆನೆಂದು ಆತನು ಹೇಳುತ್ತಾನೆ (ವಚನ 18). ಇದನ್ನು ಅನುಸರಿಸಿ, ಅವರು ಪಾಪ ಮಾಡುವದನ್ನು ಮುಂದರಿಸಿದರೆ, ಪುನಃ ಏಳು ಸಲ ಹೆಚ್ಚು ಹಾಗೂ ಪುನಃ ಏಳುಸಲ ಹೆಚ್ಚು ಶಿಕ್ಷೆ ವಿಧಿಸುತ್ತಾ ಆತನು ಹೋಗುತ್ತಾನೆ (ವಚನಗಳು 21, 24, 28). ಅಂಥ ಶಿಕ್ಷೆಗೆ ಆತನು ತನ್ನ ಕಾರಣವನ್ನು ಹೇಳಿದ್ದಾನೆ: "ನೀವು ನನ್ನ ನಿಬಂಧನವನ್ನು ಮೀರಿದದರಿಂದ ಆ ಕತ್ತಿಯು ಪ್ರತಿದಂಡನೆ ಮಾಡುವದು" (ವಚನ 25).

ಫಕ್ಕನೇ ಭಯಾನಕತೆ, ಪೈರುಗಳ ನಾಶನ, ಜ್ವರ, ಸೊರೆ ಮಾಡುವಿಕೆ ಹಾಗೂ ಅವರ ವೈರಿಗಳಿಂದ ದಬ್ಬಾಳಿಕೆ, ಬರಗಾಲ ಬಾಧೆಗಳು ಮತ್ತು ಇತರ ಬೀಕರತೆಗಳು ದೇವರಿಂದ ಕೊಡಲ್ಪಟ್ಟನಂತರವೂ ಅವರು ಮಾನಸಾಂತರ ಪಡದಿದ್ದರೆ, ದೇವರು ಒಡಂಬಡಿಕೆಯ ತನ್ನ ಭಾಗವನ್ನು ಸಂಪೂರ್ಣವಾಗಿ ರದ್ದುಪಡಿಸುವನು. "ನಿಮ್ಮನ್ನು ಅನ್ಯಜನಗಳಲ್ಲಿ ಚದರಿಸಿ ನಿಮ್ಮ ಹಿಂದೆ ಕತ್ತಿಯನ್ನು ಬೀಸುವೆನು. ನಿಮ್ಮ ದೇಶವು ಹಾಳಾಗುವುದು, ನಿಮ್ಮ ಪಟ್ಟಣಗಳು ನಾಶವಾಗುವವು" (ವಚನ 33).

## ಮುಕ್ತಾಯ

ಇಸ್ರಾಯೇಲ್ಯರೊಂದಿಗೆ ಅವರ ದೇವರಾಗಿರುವೆನು ಹಾಗೂ ಅವರು ಪ್ರವೇಶಿಸುಸುವ ದೇಶದಲ್ಲಿ, ಕಾನಾನಿನಲ್ಲಿ ಸಮೃದ್ಧಿಯೊಂದಿಗೆ ಅವರಿಗೆ ದೀರ್ಘಾಯುಷ್ಯ ಕೊಡುವೆನು ಎಂದು ದೇವರು ಒಡಂಬಡಿಕೆಯಲ್ಲಿ ತನ್ನನ್ನು ಬಂಧಿಸಿಕೊಂಡನು. ಈ ಒಡಂಬಡಿಕೆಯು

ಇಸ್ರಾಯೇಲ್ಯರನ್ನು ಮಾತ್ರವೇ ಒಳಗೊಂಡಿತ್ತು. ಜನರು ಒಡಂಬಡಿಕೆಯನ್ನು ಕೈಕೊಂಡರೆ, ಅವರು ದೇವರ ಆಶೀರ್ವಾದಗಳನ್ನು ಅನುಭವಿಸುವರು; ಆದರೆ ಅವರು ಅದನ್ನು ಮುರಿದರೆ ಆತನು ಅವರನ್ನು ದಂಡಿಸುವನು.

© 2009 Truth for Today